ಶ್ರೀ ಕೆ. ಲಕ್ಕಪ್ಪ.—ವಿವಿಧ ಇಲಾಖೆಗಳಲ್ಲಿನ ಬೀಡಿಕೆಯನ್ನು ಅನುಸರಿಸಿ ನೇಮಕ ಮಾಡತಕ್ಕ ಕೆಲಸ ಲೋಕಸೇವಾ ಆಯೋಗದ್ದು ಇದೆ. ಈ ಮೂರು ವರ್ಷಗಳ ಕಾಲ ನೇಮಕಾತಿ ಇಲ್ಲ ಎಂದೆ ಆದರೆ ಪ್ರಕಾರ ಹೋದರೆ, ನೇಮಕಾತಿ ಇಲ್ಲದ ಮೇಲೆ ಅಲ್ಲಿರತಕ್ಕ ಅಧ್ಯಕ್ಷರು ಸದಸ್ಯರು ಹಾಗೂ ಅಧಿಕಾರ ವರ್ಗಕ್ಕೆ ಏನು ಕೆಲಸ ಇದೆ ? ಲೋಕಸೇವಾ ಆಯೋಗಕ್ಕೆ ಇನ್ನೂ ಎಷ್ಟು ಸದಸ್ಯರನ್ನು ನೇಮಕ ಮಾಡಬೇಕಾಗಿದೆ.

ಶ್ರೀ ರಾಮಕೃಷ್ಣ ಹೆಗ್ಡೆ:—ಲೋಕಸೇವಾ ಆಯೋಗದಲ್ಲಿ ಯಾವ ಸದಸ್ಯರ ಸ್ಥಾನವೂ ತೆರವು ಇಲ್ಲ. ಅಲ್ಲಿಯ ಅಧ್ಯಕ್ಷರು ಕಾಯಿಲೆಯಲ್ಲಿದ್ದಾರೆ. ಅವರಿಗೆ ಶುಶ್ರೂಷೆ ನಡೆಯುತ್ತಿದೆ. ಪುನ: ಪುನ: ಮಾನ್ಯ ಲಕ್ಕಪ್ಪನವರು ಅದೇ ಹಾಡನ್ನು ಹಾಡುತ್ತಿದ್ದಾರೆ. ಮೂರು ವರ್ಷ ನೇಮಕಾತಿಯನ್ನೇ ಮಾಡುವುದಿಲ್ಲ ಎಂದಂ ಅಲ್ಲ, ಮಾಡುವುದಿಲ್ಲ ಎಂದು ಹೇಳಿಲ್ಲ. ದಯವಿಟ್ಟು ಆ ಒಂದು ವಿಚಾರ ಪೆನ್ನು ಮೆಶ್ಕೆ ಹರಡಬೇಡಿ ಹಿಂದೆ ಮಾಡಿದ ಸರ್ಕಾರಿ ಆಜ್ಞೆಯನ್ನು ತಿದ್ದುಪಡಿ ಮಾಡಿದ್ದೇವೆ. ಇವತ್ತು ಸರ್ಕಾರಿ ನೌಕರಿ ಒಂದೇ ಉದ್ಯೋಗ ಅಲ್ಲ. ಇದನ್ನು ನಾನು ಅನೇಕ ಸಲ ಹೇಳಿದ್ದೇನೆ. ಸುಶಿಕ್ಷಿತ. ಯಾವಕರು ಬೇರೆ ಬೇರೆ ರೀತಿಯ ಉದ್ಯೋಗಗಳನ್ನು ಮಾಡಬಹುದು, ಇರುವ ಉದ್ಯೋಗಾರ್ಥಿಗಳ ಪೈಕಿ ನೂರಕ್ಕೆ ಒಂದು ಅಥವಾ ಒಂದಾವರೆಯಷ್ಟು. ವ್ಯಕ್ತಿಗಳಿಗೆ ಸರ್ಕಾರಿ ನೌಕರಿ ಸಿಗುತ್ತದೆ.

ಗಂಬ್ಟಿ ನಗರದಲ್ಲಿ ಆಸ್ಪತ್ರೆಗಾಗಿ ಶಂಕು ಸ್ಥಾಪನೆ

೧೭೧೭. ಶ್ರೀ ಜಿ. ಎಸ್. ಶಿವಸಂಜಪ್ಪ (ಗಂಬ್ಟಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆ ಗುಬ್ಬಿ ನಗರದಲ್ಲಿ ೩೦ ಹಾಸಿಗೆಗಳ ಆಸ್ಪತ್ರೆ ಕಟ್ಟಡಕ್ಕಾಗಿ ಶಂಕು ಸ್ಥಾಪನೆ ಯಾವಾಗ ಮಾಡಲಾಯಿತು ?

(ತಾರೀಖು ವಿವರ ನೀಡುವುದು)

ಆ) ಧಾನಿಗಳು ಒಂದು ಲಕ್ಷ ರೂ ಗಳನ್ನು ಸದರಿ ಕಟ್ಟಡಕ್ಕಾಗಿ ವಂತಿಗೆಯಾಗಿ ಕೊಟ್ಟಿರುವುದರಿ ಸರ್ಕಾರದ ಗಮನಕ್ಕೆ ಬಂದಿದೆಯೇ ? ಈ ಹಣ ಉಪಯೋಗಿಸಿ ಕಟ್ಟಡ ಕಟ್ಟಬೇಕೆಂದು ಸಾರ್ವಜನಿಕರು ಹಾಗೂ ಪುರ ಪ್ರಮುಖರು ಸರ್ಕಾರವನ್ನು ಪ್ರಾರ್ಥಿಸುತ್ತಾ ಬಂದಿದ್ದರೂ ಕಟ್ಟಡವನ್ನು ಕಟ್ಟದೇ ಇರಲು ಸರ್ಕಾರದವರಂ ಕೈಗೊಂಡ ಕ್ರಮಗಳೇನು ?

ಇ) ಹಾಗಿಲ್ಲದಿದ್ದಲ್ಲಿ ಕಟ್ಟಡ ಕಟ್ಟಿಸುವುದಕ್ಕೆ ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿ ಕುಟುಂಬ ಕಲ್ಯಾಣ ಸಚಿವರು).—

ಅ) ದಿನಾಂಕ ೧೪-೧೧-೧೯೮೪.

ಆ) ೩೦ ಹಾಸಿಗೆಗಳ ಆಸ್ಪತ್ರೆ ಕಟ್ಟಡದ ಒಂದು ಭಾಗವಾದ ೧೦ ಹಾಸಿಗೆಗಳ ಒಂದಂ ವಾರ್ಡನ್ನು ಕಟ್ಟಲು ಗುಬ್ಬಿ ಲಯನ್ಸ್ ಕ್ಲಬ್‌ನವರು ರೂ. ೧.೨೫ ಲಕ್ಷಗಳನ್ನು ದಾನವಾಗಿ ಕೊಡಲು ಒಪ್ಪಿರುತ್ತಾರೆ.

ಇ) ಜಿಲ್ಲಾ ಪರಿಷತ್‌ನವರು ಈ ಕಾಮಗಾರಿಗೆ ಹಣವನ್ನು ಬಿಡುಗಡೆ ಮಾಡಿದ ನಂತರ ಕಟ್ಟಡ ಕಟ್ಟಲು ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

ಶ್ರೀ ಜಿ. ಎಸ್. ಶಿವಸಂಜಪ್ಪ.—ಅಧ್ಯಕ್ಷರೇ, ೧೪-೧೧-೧೯೮೪ರಂದು ಶಂಕುಸ್ಥಾಪನೆ ಮಾಡಲಾಯಿತು ಎಂದು ಉತ್ತರ ಕೊಟ್ಟಿದ್ದಾರೆ. ಈ ಶಂಕುಸ್ಥಾಪನೆ ಮಾಡುವುದಕ್ಕಿಂತಲೂ ಮೊದಲು ಈ ವಿಚಾರದಲ್ಲಿ ನಕ್ಷೆಯಾಗಲೀ, ಎಸ್ಟಿಮೇಟ್ ಆಗಲೀ, ಮಂಜೂರಾತಿಯಾಗಲೀ, ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷೆನ್ ಆಗಲೀ ಆಗಿತ್ತೇ ಎಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಆಗಿರಲಿಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ಅಧ್ಯಕ್ಷರೇ, ಇದು ಸರ್ಕಾರದ ನೀತಿಯೇ ? ಈ ನೀತಿ ಸರಿಯೇ? ಆ ಜನರನ್ನು ಮೋಸ ಮಾಡುವುದಕ್ಕೋಸ್ಕರ ಜನತಾ ಪಕ್ಷ ಇಂತಹ ಒಂದು ನೀತಿಯನ್ನು ಹಾಕಿಕೊಂಡು ಬಂದಿದೆಯೇ ? ಎಲ್ಲಿ ಬೇಕಾದರಲ್ಲಿ ಶಂಕುಸ್ಥಾಪನೆ ಮಾಡಿ ಜನತಾ ಸರ್ಕಾರದವರು ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ನಕ್ಷೆ, ಅಂದಾಜು ಹಾಗೂ ಮಂಜೂರಾತಿ ಮಾಡದೇ ಆಡಿಗಲ್ಲು ಹಾಕಿರುವುದು ಸರ್ಕಾರದ ನೀತಿ ಅಲ್ಲ. ನೀವು ಆಫೀಸ್ ಶಂಕುಸ್ಥಾಪನೆ ಮಾಡಿ ಬಿಡಿ. ಅಲ್ಲಿ ಲೋಕಲ್ ಕಾಂಟ್ರಿಬ್ಯೂಷನ್ ಕೊಡುತ್ತಿದ್ದಾರೆ ಎಂದು ಮಾನ್ಯ ಶಿವನಂಜಪ್ಪನವರು ಹೇಳಿದ್ದರಿಂದೇನಾದರೂ ಹಿಂದಿನ ಆರೋಗ್ಯ ಸಚಿವರು ಹಾಗೆ ಮಾಡಿರಬಹುದು.

ಶ್ರೀ ಜಿ. ಎಸ್. ಶಿವನಂಜಪ್ಪ.—೧೯೮೪ರಲ್ಲಿ ನಾನು ಎಂ. ಎಲ್. ಎ. ಆಗಿರಲಿಲ್ಲ, ಜನರನ್ನು ಮೋಸ ಮಾಡುವುದಕ್ಕೋಸ್ಕರ ಆಗ ಹೊಸದಾಗಿ ಅಧಿಕಾರಕ್ಕೆ ಬಂದ ಸರ್ಕಾರ ಆ ರೀತಿ ಮಾಡಿ ಬಿಟ್ಟಿದೆ. ಹೊಸದಾಗಿ ಅಧಿಕಾರಕ್ಕೆ ಬಂದ ಜನತಾ ಸರ್ಕಾರ ಗಟ್ಟಿಯಾಗಿ ನಿಲ್ಲಲಿ ಎಂದು ಹೇಳಿ ಈ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆಯೇ ?

ಅಧ್ಯಕ್ಷರು.—ಮೋಸ ವಂಚನೆ ಅದನ್ನೆಲ್ಲಾ ಬಿಟ್ಟು ನೇರವಾಗಿ ಕೇಳಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ಈ ಸಲ ಜನರನ್ನು ತಪ್ಪುದಾರಿಗೆ ಏಳಿಯತಕ್ಕ ಕೆಲಸವನ್ನು ನಿಲ್ಲಿಸಿಬಿಡಿ, ದಾನಿಗಳು ೬೦ ಸಾವಿರ ಕೊಟ್ಟಿದ್ದಾರೆ. ಲೈಯನ್ಸ್ ಕ್ಲಬ್ಸ್‌ನವರು ೧ ಲಕ್ಷ. ೨೫ ಸಾವಿರ ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಇದು ಜಿಲ್ಲಾ ಪರಿಷತ್ತಿನಲ್ಲಿ ೩-೪ ತಿಂಗಳುಗಳ ಹಿಂದೆ ಪ್ರಸ್ತಾಪಕ್ಕೆ ಬಂದು ನಕ್ಷೆ ತಯಾರು ಮಾಡಿ, ನಕ್ಷೆಯನ್ನು ಅಪ್ರೂವಲ್ ಮಾಡಿ, ಕೊಟ್ಟಿದ್ದರೂ ಕೂಡ ಇದುವರೆಗೂ ಮಂಜೂರಾತಿ ಕೊಟ್ಟಿಲ್ಲ. ಅದಕ್ಕೆ ಕಾರಣವೇನು ?

ಶ್ರೀ ಬಿ. ರಾಚಯ್ಯ.—ನಕ್ಷೆಯನ್ನು ಅಪ್ರೂವಲ್ ಮಾಡಿಕೊಡಿ ಎಂದು ಆರೋಗ್ಯ ಇಲಾಖೆಯವರು ಜಿಲ್ಲಾಧಿಕಾರಿಗಳಿಗೆ, ಹಾಗೂ ಜಿಲ್ಲಾಪರಿಷತ್ತಿಗೆ ಒಪ್ಪಿಸಿದ್ದಾರೆ. ಇದಕ್ಕೆ ಆಡಳಿತಾತ್ಮಕವಾಗಿ ಇನ್ನು ಒಪ್ಪಿಗೆ ಬಂದಿಲ್ಲ. ಮಾನ್ಯ ಸದಸ್ಯರು ೬೦ ಸಾವಿರ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಆದು ನನ್ನ ರೆಕಾರ್ಡ್‌ನಲ್ಲಿ ಇಲ್ಲ. ಆದರೂ ಕೂಡ, ಮಾನ್ಯ ಶಿವನಂಜಪ್ಪನವರು ಹೇಳಿರುವುದರಿಂದ ಈ ೬೦ ಸಾವಿರ ಹಾಗೂ ೧ ಲಕ್ಷ ೨೫ ಸಾವಿರ ಬಂದಿದೆಯೆಂದು ತಿಳಿದುಕೊಳ್ಳುತ್ತೇನೆ. ಈ ಜಿಲ್ಲೆಯಲ್ಲಿ ಇಂತಹ ಕಟ್ಟಡ ಕಟ್ಟಲು ಈ ವರ್ಷ ೩ ಲಕ್ಷ ಕೊಟ್ಟಿದ್ದೇವೆ. ಕಳೆದ ವರ್ಷ ೮ ಲಕ್ಷ ಕೊಟ್ಟಿದ್ದೆವು. ಅದರಲ್ಲಿ ಕಾಣಿಗಲ್ ತಾಲ್ಲೂಕಿನಲ್ಲಿ ಆಸ್ಪತ್ರೆ ಕಟ್ಟಲು ಉಪಯೋಗಿಸಿಕೊಂಡಿದ್ದಾರೆ. ಈ ವರ್ಷ ಇದನ್ನು ಪ್ರಾರಂಭ ಮಾಡಲು ಹಣವನ್ನು ಒದಗಿಸುತ್ತೇನೆ.

ಕ. ರಾ. ರ. ಸಾ. ಸಂಸ್ಥೆಯಂವರು ಗಳಿಸಿದ ಲಾಭ ಹಾಗೂ ನಷ್ಟ

೧೩೬೬. ಶ್ರೀ ಜಿ. ರಾಜೂ ಗೌಡ, (ಹನೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸರಾಸರಿ ಒಂದು ದಿನಕ್ಕೆ ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ವಿವಿಧ ಸ್ಥಳಗಳಿಗೆ ಪ್ರಯಾಣಿಸುವವರ ಸಂಖ್ಯೆ ಎಷ್ಟು ?

ಆ) ಪ್ರತಿದಿನ ಸರಾಸರಿ ಎಷ್ಟು ಮೈಲಿಗಳ ಸಂಚಾರ ಮಾಡಲಾಗುತ್ತಿದೆ ?

ಇ) ಒಂದು ಲೀಟರ್ ಪೆಟ್ರೋಲಿಗೆ ಸರಾಸರಿ ಎಷ್ಟು ಮೈಲಿ ಓಡಿಸಲಾಗುತ್ತಿದೆ ?

ಈ) ೧೯೮೬-೮೭ ಮತ್ತು ೧೯೮೭-೮೮ರಲ್ಲಿ ಈ ಸಂಸ್ಥೆ ಗಳಿಸಿರುವ ಲಾಭ ಮತ್ತು ನಷ್ಟದ ಪ್ರಮಾಣವೆಷ್ಟು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ಸುಮಾರು ೪೭ ಲಕ್ಷ ಪ್ರಯಾಣಿಕರು ಪ್ರತಿದಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಾಹನಗಳಲ್ಲಿ ಪ್ರಯಾಣಿಸುತ್ತಾರೆ.